# ಆಧ್ಯಾತ್ಮಿಕ ಸಾಧಕರಿಗೆ ಭಾಗವತದ ಸಂದೇಶ

**ಡಾ. ವಾಗೀಶ್ವರೀ ಶಿವರಾಮ**



ಭಗವಂತನ ದಿವ್ಯಲೀಲೆಗಳನ್ನು ಚಿತ್ರಿಸುವ ಭಾಗವತವು ಹೇಗೆ ಸಾಧಕರಿಗೆ ಹಲವು ರೀತಿಯಲ್ಲಿ ಮಾರ್ಗದರ್ಶಕವಾಗಿದೆ ಎಂಬುದನ್ನು ಇಲ್ಲಿ ಲೇಖಕರು ಮನಗಾಣಿಸಿದ್ದಾರೆ. ಹಿರಿಯ ಸಂಸ್ಕೃತ ವಿದ್ವಾಂಸರಾಗಿರುವ ಅವರು, ಮಂಗಳೂರಿನಲ್ಲಿ ಅಧ್ಯಾಪಕರಾಗಿ ಅನೇಕ ವರ್ಷ ಸೇವೆ ಸಲ್ಲಿಸಿದ್ದು, ಮೂವತ್ತಕ್ಕೂ ಹೆಚ್ಚು ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿ ಗಳೂ ಹೌದು.

ವೇದ ಮತ್ತು ಉಪನಿಷತ್ತುಗಳಲ್ಲಿ ಹೇಳಿರುವ ಆತ್ಮತತ್ತ್ವವು, ವೇದವ್ಯಾಸರಿಂದ ರಚಿತವಾದ ಶ್ರೀಮದ್ ಭಾಗವತ ಪುರಾಣದಲ್ಲಿ ನಿರೂಪಿತವಾಗಿದೆ. ಉಪನಿಷತ್ತುಗಳ ಮೂಲಕ ಪ್ರತಿಪಾದಿತವಾಗಿರುವ 'ಪರಬ್ರಹ್ಮವೇ'(ಪರಮಾತ್ಮನೇ) ಭಾಗವತದ ಶ್ರೀಕೃಷ್ಣ. ಶ್ರೀಕೃಷ್ಣನೇ ಸತ್-ಚಿತ್-ಆನಂದ ಸ್ವರೂಪನು. ಜಗತ್ತು ಮಿಥ್ಯಾರೂಪವಾದುದು. ಎಲ್ಲ ಜೀವರೂ ಕೃಷ್ಣಸ್ವರೂಪರೇ (ಪರಬ್ರಹ್ಮಸ್ವರೂಪರೇ). ಈ ಆತ್ಮಾನುಭವವನ್ನು ಹೊಂದುವ ಹಂತಕ್ಕೆ ಏರಬೇಕೆಂಬುದೇ ಭಾಗವತದ ಗುರಿ. ಭಾಗವತದಲ್ಲಿನ ೧. ಅಧಿಕಾರಿ, ೨. ಸಾಧನಾ, ೩.ಜ್ಞಾನಕ್ರಿಯಾನ್ವಯನ, ೪.ಪುರುಷಾರ್ಥ, ೫. ಸ್ಥಿತಿ, ೬. ಪುಷ್ಟಿ, ೭. ವಾಸನಾ, ೮.ವಾಸನಾನಿರಸನ, ೯. ವಂಶಾನುಚರಿತ, ೧೦. ನಿರೋಧ, ೧೧.ಮುಕ್ತಿ, ೧೨.ಆಶ್ರಯ — ಎಂಬ ಹನ್ನೆರಡು ಸ್ಕಂಧಗಳು ಆತ್ಮಾನುಭವದ ಗುರಿಯನ್ನು ತಲುಪಲು ಇರುವ ಹನ್ನೆರಡು ಮೆಟ್ಟಿಲುಗಳಾಗಿವೆ.

### ಶ್ರೀಮದ್ ಭಾಗವತದ ಪರಂಪರೆ

ಸ್ವಯಂ ಭಗವಾನ್ ನಾರಾಯಣನೇ ಸೃಷ್ಟಿಕರ್ತ ಬ್ರಹ್ಮನಿಗೆ ಭಾಗವತದ ತತ್ತ್ವವನ್ನು ಉಪದೇಶಿಸಿದ. ಇದು ''ಚತುಃಶ್ಲೋಕೀ ಭಾಗವತ'' ಎಂದು ಪ್ರಸಿದ್ಧವಾಗಿದೆ. ಬ್ರಹ್ಮನು ತನ್ನ ಮಾನಸಪುತ್ರನಾದ ನಾರದನಿಗೆ, ನಾರದ ವೇದವ್ಯಾಸರಿಗೆ; ವೇದವ್ಯಾಸರು ತಮ್ಮ ಮಗನಾದ ಶುಕನಿಗೆ, ಶುಕನು ರಾಜನಾದ ಪರೀಕ್ಷಿತನಿಗೆ (ಅರ್ಜುನನ ಮೊಮ್ಮಗನಿಗೆ) ಭಾಗವತವನ್ನು ಹೇಳಿದರು.

ಶ್ರೀಕೃಷ್ಣನು (ಭಗವಂತನ ಎಂಟನೇ ಅವತಾರ), ಮಾನವನಾಗಿ ತನ್ನ ಅವತಾರವನ್ನು ತ್ಯಜಿಸುವಾಗ, ಉದ್ಧವನ ಪ್ರಾರ್ಥನೆಯಂತೆ ತನ್ನ ಎಲ್ಲ ತೇಜಸ್ಸನ್ನು 'ಭಾಗವತ ಪುರಾಣ'ದಲ್ಲಿ ತುಂಬಿ ಸ್ವಧಾಮಕ್ಕೆ ತೆರಳಿದನು. ಸಾಕ್ಷಾತ್ ಭಗವಂತನೇ, ಭಾಗವತ ಗ್ರಂಥದ ರೂಪದಲ್ಲಿ ಇದ್ದಾನೆ. ಭಗವಂತ, ಭಾಗವತ ಹಾಗೂ ಭಕ್ತ ಬೇರೆ, ಬೇರೆ ಅಲ್ಲ.

### ಭಾಗವತದಲ್ಲಿ ನಿರೂಪಿತವಾಗಿರುವ ತತ್ತ್ವಗಳು

* ಮರಣ ಸಮೀಪಿಸಿರುವ ಪರೀಕ್ಷಿತ್ ಮಹಾರಾಜನು, ಭಗವಂತನ ಸ್ವರೂಪವನ್ನು ತಿಳಿದುಕೊಳ್ಳಲು ಉತ್ಕಟವಾಗಿ ಹಂಬಲಿಸಿದ. ಆತನ ಬಳಿಗೆ ಶುಕಮುನಿಯು ತಾನಾಗಿಯೇ ಬಂದು ಉಪದೇಶಿಸಿದ. ಭಗವಂತನನ್ನು ಕಾಣಲು ದೃಢನಿರ್ಧಾರದಿಂದ ಕಾಡಿಗೆ ಬಂದಿದ್ದ ಬಾಲಕ ಧ್ರುವನಿಗೆ, ನಾರದರು ಮಂತ್ರೋಪದೇಶವನ್ನು ನೀಡಿದರು. ವಿಷಾದದಿಂದ ತಪ್ತನಾದ ಅರ್ಜುನನಿಗೆ, ಶ್ರೀಕೃಷ್ಣನು ಗೀತೋಪದೇಶ ಮಾಡಿದ. ಈ ದೃಷ್ಟಾಂತಗಳು, 'ಸಾಧಕನಲ್ಲಿ ಇರುವ ತೀವ್ರವಾದ ಇಚ್ಛಾಶಕ್ತಿಯೇ, ಆತನ ಮೊದಲ ಗುರು. ಇಂತಹ ಸಾಧಕನ ಬಳಿಗೆ ಗುರುವು ತಾನಾಗಿಯೇ ಬರುತ್ತಾನೆ' ಎಂಬುದನ್ನು ತಿಳಿಸುತ್ತವೆ. (ಅಧಿಕಾರಿ ಸ್ಕಂಧದ ಸಾರ)

* ಎಲ್ಲಾ ಕಡೆ, ಎಲ್ಲರಲ್ಲಿಯೂ, ಎಲ್ಲದರಲ್ಲಿಯೂ ಇರುವ ಭಗವಂತನನ್ನು ಕಾಣುವ ಭಾವವನ್ನು(ಸರ್ವಾತ್ಮತ್ವ ಭಾವವನ್ನು) ಬೆಳೆಸಿಕೊಳ್ಳಬೇಕು. ಇದಕ್ಕೆ ಸುಲಭವಾದ ಮಾರ್ಗವೆಂದರೆ ಯಾವಾಗಲೂ ಇಷ್ಟದೇವರ ನಾಮಸ್ಮರಣೆಯನ್ನು ಮಾಡುವುದು. (ರಾಮ, ಕೃಷ್ಣ, ಗೋವಿಂದ, ದುರ್ಗೆ, ನಾರಾಯಣ, ಶಿವ ಇತ್ಯಾದಿ). ಸಾಧನೆ ಪಕ್ವವಾದಾಗ ಭಗವಂತನ ದರ್ಶನವಾಗುತ್ತದೆ.

* ಪರಬ್ರಹ್ಮವೇ (ಪರಮಾತ್ಮನೇ) ಸತ್ಯ. ಕಣ್ಣಿಗೆ ಕಾಣಿಸುವ ಜಗತ್ ಮಿಥ್ಯಾರೂಪವಾದುದು (ಪಾರಮಾರ್ಥಿಕ ಸತ್ಯವಲ್ಲ). ಪ್ರತಿಯೊಬ್ಬ ಜೀವನೂ ಪರಮಾತ್ಮನೇ. ತಾನು ಆತ್ಮಸ್ವರೂಪನೇ ಎನ್ನುವ ಅನುಭವವನ್ನು ಪಡೆಯುವುದೇ ಜೀವನದ ಪರಮ ಗುರಿಯಾಗಿದೆ. (ಸಾಧನಾ ಸ್ಕಂಧದ, ಚತುಶ್ಲೋಕಿ ಭಾಗವತದ ಸಾರ).

* ಸಾಧಕನ ಮನಸ್ಸೇ, ಆತನ ಬಂಧನಕ್ಕೂ ಹಾಗೂ ಮುಕ್ತಿಗೂ ಕಾರಣ. ಆತ್ಮದರ್ಶನವನ್ನು ಪಡೆಯಲು (ಮೋಕ್ಷವನ್ನು ಹೊಂದಲು) ಸತ್ಸಂಗವನ್ನು ಮಾಡಬೇಕು. ಸಾಧುವಾದವನು ಎಲ್ಲರಲ್ಲೂ ಭಗವಂತನನ್ನೇ ಕಾಣುತ್ತಾ, ಎಲ್ಲರನ್ನೂ ಪ್ರೀತಿಸುತ್ತಾನೆ. ತಾಯಿ ಸುನೀತಿಯು ಧ್ರುವನಿಗೆ ಹೇಳಿದ ಉಪದೇಶ ಇದೇ ಆಗಿದೆ.

* ಕೋಪ ಮತ್ತು ಆಸೆಯನ್ನು ಬಿಡದೆ ತಪಸ್ಸನ್ನು ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಸಂಸಾರದಲ್ಲಿಯೇ ಇದ್ದು ಸುಖ-ದುಃಖ, ಲಾಭ-ನಷ್ಟಗಳನ್ನು ಸಮಾನವಾಗಿ ಕಾಣುವುದು, ಕಾಡಿಗೆ ಹೋಗಿ ತಪಸ್ಸನ್ನು ಮಾಡುವುದಕ್ಕಿಂತಲೂ ಶ್ರೇಷ್ಠವಾಗಿದೆ. (ಸ್ಥಿತಿ ಸ್ಕಂಧದ ಸಾರ)

* ದೇವರ ಕೃಪೆ ಇದ್ದಾಗಲೇ ಎಲ್ಲವೂ ಸಾಧ್ಯವಾಗುತ್ತದೆ. ಕಲಿಯುಗದಲ್ಲಿ ದೇವರನ್ನು ಒಲಿಸಿಕೊಳ್ಳುವ ಸುಲಭ ಮಾರ್ಗವೆಂದರೆ ಆತನ ನಾಮಸ್ಮರಣೆ ಹಾಗೂ ಸದ್ವಿಚಾರಗಳ ಚಿಂತನೆ. ನಾಮಸ್ಮರಣೆ ಕೇವಲ ಯಾಂತ್ರಿಕವಾಗಿ ಇರದೆ, ವಿಶ್ವಾಸಪೂರ್ಣವೂ, ಭಾವನಾತ್ಮಕವಾಗಿಯೂ ಇರಬೇಕು.

* ಪ್ರಾಣಕ್ಕೇ ಅಪಾಯ ಬಂದಾಗಲೂ, ದೇವರ ನಾಮಸ್ಮರಣೆಯನ್ನು ಬಿಡಬಾರದು. ಇಂತಹ ಅಚಲಭಕ್ತಿಯನ್ನು ಪ್ರಹ್ಲಾದನ ಚರಿತ್ರೆಯಲ್ಲಿ ಕಾಣಬಹುದು. ತಂದೆಯಾದ ಹಿರಣ್ಯಕಶಿಪುವೇ, ಮಗನಾದ ಪ್ರಹ್ಲಾದನನ್ನು ಪರ್ವತದಿಂದ ಕೆಳಕ್ಕೆ ತಳ್ಳಿಸಿದರೂ, ಸಮುದ್ರಕ್ಕೆ ಎಸೆದರೂ, ಹಾವುಗಳಿಂದ ಕಚ್ಚಿಸಿದರೂ, ವಿಷಪಾನ ಮಾಡಿಸಿದರೂ ಪ್ರಹ್ಲಾದನು ಹರಿಯ ನಾಮಸ್ಮರಣೆಯನ್ನೂ ತನ್ನ ಅಚಲವಾದ ವಿಶ್ವಾಸವನ್ನೂ ಬಿಡಲಿಲ್ಲ. ಹರಿಯು ತನ್ನ ಭಕ್ತನನ್ನು ಎಲ್ಲಾ ಆಪತ್ತುಗಳಿಂದಲೂ ರಕ್ಷಿಸಿದ. ತಂದೆ ಗದೆ ಹಿಡಿದು ಗರ್ಜಿಸಿ, ಕಂಬವನ್ನು ಸೀಳಿದಾಗ ಭಗವಂತನು ನರಸಿಂಹನಾಗಿ ಅವತರಿಸಿ, ಹಿರಣ್ಯಕಶಿಪುವನ್ನು ಸಂಹರಿಸಿ, ತನ್ನ ಭಕ್ತನ ಮಾತು ಸತ್ಯವಾಗುವಂತೆ ಮಾಡಿದ.

ಹಿರಣ್ಯಕಶಿಪು (ಚಿನ್ನವೇ ಅನ್ನವಾಗಿ ಉಳ್ಳವನು) ಹಾಗೂ ಹಿರಣ್ಯಾಕ್ಷ (ಚಿನ್ನದಲ್ಲಿಯೇ ದೃಷ್ಟಿಯುಳ್ಳವನು) — ಸುಖ-ಸಂಪತ್ತುಗಳ ಭೋಗಗಳಲ್ಲಿಯೇ ಮುಳುಗಿದ್ದು, ಭಗವಂತನನ್ನು ಮರೆತಿರುವ ಜೀವಿಗಳ ಪ್ರತೀಕ. ಪ್ರಹ್ಲಾದನಿಗೆ ಸುಖ-ಭೋಗಗಳಿಗಿಂತಲೂ, ಪರಮಾತ್ಮನೇ ಪ್ರಿಯನಾಗಿದ್ದ. ಆದ್ದರಿಂದಲೇ ಆತನ ಕೃಪೆ ಉಂಟಾಗಿತ್ತು.

* ಮಹಾಬಲಶಾಲಿಯಾಗಿದ್ದರೂ, ಇಂದ್ರನಂತೆ ಸುಖ-ಭೋಗಗಳಿದ್ದರೂ ಸಂಸಾರ ಬಂಧನದಿಂದ ಮುಕ್ತನಾಗಲು ಭಗವಂತನಲ್ಲಿ ಶರಣಾಗಬೇಕು. ಗಜೇಂದ್ರಮೋಕ್ಷದ ಕಥೆ ಈ ತತ್ತ್ವವನ್ನು ತಿಳಿಸುತ್ತದೆ.

ಗಜರಾಜ- ಬಲಶಾಲಿಯಾದ ಬಂಧು-ಬಳಗ ಸುಖ ಸಂಪತ್ತುಗಳಿರುವ ವ್ಯಕ್ತಿಯ ಪ್ರತೀಕ. ಮೊಸಳೆ-ಸಂಸಾರದ ಪ್ರತೀಕ. ಮೊಸಳೆ, ಗಜರಾಜನ ಕಾಲನ್ನು ಹಿಡಿದಾಗ, ಸೊಂಡಿಲಿನಿಂದ ಪುಷ್ಪವನ್ನು ಎತ್ತಿಹಿಡಿದು ಅದು ಭಗವಂತನನ್ನು ಸ್ಮರಿಸಿತು. ಭಗವಂತ ಚಕ್ರದಿಂದ, ನಕ್ರನನ್ನು ಸಂಹರಿಸಿ ಬಂಧಮುಕ್ತಗೊಳಿಸಿದ.

* ''ದೇವರನ್ನು ಪಡೆಯಲೇಬೇಕೆಂಬ ಅದಮ್ಯವಾದ ಬಯಕೆ ಇದ್ದಾಗ, ಭಗವಂತನೇ ಬಂದು ಉದ್ಧರಿಸುತ್ತಾನೆ.''

ರುಕ್ಮಿಣೀ ಕಲ್ಯಾಣದ ಕಥೆ ಈ ಸಂದೇಶವನ್ನು ಸಾರುತ್ತದೆ. ''ರುಕ್ಮಿಣಿಯ ಅರಮನೆಗೆ ಬರುತ್ತಿದ್ದ ಸಾಧು-ಸಂತರ ಸಂಭಾಷಣೆಯಿಂದ ಶ್ರೀಕೃಷ್ಣನ ಗುಣಗಾನವನ್ನು ಕೇಳಿ, ಆತನನ್ನೇ ಮದುವೆ ಆಗಬೇಕೆಂದು ನಿಶ್ಚಯಿಸಿದಳು. ಹಗಲೂ ಇರುಳೂ ಆತನಿಗಾಗಿಯೇ ಹಂಬಲಿಸಿದಳು. ಅಣ್ಣ ರುಕ್ಮಿ, ತಂಗಿಯನ್ನು ಶಿಶುಪಾಲನಿಗೇ ಕೊಟ್ಟು ವಿವಾಹ ಮಾಡಬೇಕೆಂದು ನಿಶ್ಚಯಿಸಿದ್ದ. ರುಕ್ಮಿಣಿಯು, ಶ್ರೀಕೃಷ್ಣನಿಗೆ- ''ನೀನಿಲ್ಲದೆ ಬೇರೆಯವರನ್ನು ವರಿಸುವುದಿಲ್ಲ. ನೀನು ಬಾರದಿದ್ದರೆ ನಾನು ಪ್ರಾಣ ತ್ಯಜಿಸುವೆ'' ಎಂದು ಸಂದೇಶವನ್ನು ಕಳುಹಿಸಿದಳು. ಶ್ರೀಕೃಷ್ಣನು, ಕೂಡಲೇ ಹೊರಟು ಬಂದು, ಅವಳನ್ನು ಅಪಹರಿಸಿ, ಹಿಂಬಾಲಿಸಿ ಬಂದ ಶತ್ರುಗಳನ್ನು ಓಡಿಸಿ, ಮದುವೆಯಾದ.'' ರುಕ್ಮಿಣಿ-ಜೀವಾತ್ಮನ ಪ್ರತೀಕ. ಸತ್ಸಂಗದಿಂದ ದೇವರ ಮಹಿಮೆಯನ್ನು ತಿಳಿದಾಗ, ದೇವರನ್ನೇ ಪಡೆಯಬೇಕೆಂಬ ಬಯಕೆ ಉಂಟಾಗುತ್ತದೆ. ತೀವ್ರವಾದ ಹಂಬಲದಿಂದ ಭಗವಂತನ ದರ್ಶನವಾಗುತ್ತದೆ. ರುಕ್ಮಿ, ಶಿಶುಪಾಲ-ಇವರೆಲ್ಲಾ ಜೀವಾತ್ಮನ ಸಾಮಾನ್ಯವಾದ ಮನಃಪರಿಸ್ಥಿತಿಯ ಪ್ರತೀಕ. ಸಾಮಾನ್ಯ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಿಕೊಂಡಾಗಲೇ, ಆತನ ದರ್ಶನ ಸಾಧ್ಯ

* ಪ್ರತಿಯೊಂದು ಜೀವಿಯಲ್ಲೂ ಭಗವಂತ (ಆತ್ಮ) ಇದ್ದಾನೆ. ಆದ್ದರಿಂದ ನಿಜವಾದ ಭಕ್ತನು, ಎಲ್ಲಾ ಜೀವಿಗಳನ್ನೂ ಪ್ರೀತಿಸುತ್ತಾನೆ. ದೇಹ, ಮನಸ್ಸು, ಬುದ್ಧಿ, ಇಂದ್ರಿಯಗಳು-ಇವುಗಳಿಂದ ಪರಮಾತ್ಮನನ್ನು ತಿಳಿಯಲು ಅಸಾಧ್ಯ. ಪರಮಾತ್ಮನ ಅರಿವು ಇಂದ್ರಿಯಾತೀತವಾದ ಜ್ಞಾನವೇ ಆಗಿದೆ. ನಾಮಸ್ಮರಣೆ ಮಾಡುತ್ತಾ ಶರಣಾದಾಗಲೇ ಭಗವಂತನನ್ನು ಕಾಣಬಹುದು. (ಮುಕ್ತಿ ಸ್ಕಂಧದ ಸಾರ)

* ಪ್ರಪಂಚದಲ್ಲಿರುವ ವಸ್ತುಗಳನ್ನು ನೋಡಿ, ಬೇಕು-ಬೇಡ ಎಂಬ ಭಾವನೆಗಳು ಉಂಟಾದಾಗ, ಮನಸ್ಸಿನಲ್ಲಿ ಅಶಾಂತಿ ಉಂಟಾಗುತ್ತದೆ. ನಿರಂತರವಾಗಿ ಆಲೋಚನೆಗಳ ಅಲೆಗಳು ಏಳುತ್ತವೆ. ಆದ್ದರಿಂದ ಭಗವಂತನ ಧ್ಯಾನದಲ್ಲಿ ತಲ್ಲೀನನಾದಾಗ, ಮನಸ್ಸು ಶಾಂತಿಯನ್ನು ಅನುಭವಿಸುತ್ತದೆ. ಶಾಂತವಾದ ಮನಸ್ಸೇ ಭಗವಂತನ ದರ್ಶನಕ್ಕೆ ಮೂಲವಾಗಿದೆ.

* ಆತ್ಮಾನಂದದ ಅನುಭವವೇ(ಮೋಕ್ಷವೇ) ಮನುಷ್ಯನ ಜೀವನದ ಅಂತಿಮ ಗುರಿ. ಆದರೆ ಮನುಷ್ಯ ಜನಪ್ರಿಯತೆ, ಪವಾಡ, ಸಿದ್ಧಿ, ಪ್ರಶಂಸೆ, ಅಧಿಕಾರ, ಹೆಣ್ಣು, ಹೊನ್ನು ಮಣ್ಣು ಇತ್ಯಾದಿ ಆಕರ್ಷಣೆಗಳನ್ನು (ಮಾಯಾಲೋಕದ ಭ್ರಮೆಗಳನ್ನು) ಹಿಂಬಾಲಿಸುತ್ತಾನೆ. ತನ್ನ ಸ್ವರೂಪಸಿದ್ಧಿಗೆ (ಆತ್ಮದರ್ಶನಕ್ಕೆ) ಪ್ರಯತ್ನಿಸುವುದೇ ಇಲ್ಲ. ಅಜ್ಞಾನದಿಂದ ಕಾಮನೆಗಳು, ಕಾಮನೆಗಳಿಂದ ಕರ್ಮ, ಕರ್ಮಗಳಿಂದ ಸಂಸಾರ ಬಂಧ-ಈ ಚಕ್ರದಲ್ಲೇ ತಿರುಗುತ್ತಿರುತ್ತಾನೆ.

* ನಿಜವಾದ ಸಾಧಕನು ತನ್ನ ಎಲಾ ಕರ್ಮಗಳನ್ನೂ ಭಗವಂತನಿಗೇ ಅರ್ಪಿಸುತ್ತಾ, ಯಾವುದೇ ಇಂದ್ರಿಯಸುಖವನ್ನು ಇಚ್ಛಿಸದೆ, ಭಗವಂತನಲ್ಲಿಯೇ ಆಶ್ರಯವನ್ನು ಪಡೆಯುತ್ತಾನೆ.

* 'ಆತ್ಮ ಅವಿನಾಶಿ' ಎಂದು ದೃಢವಾಗಿ ನಂಬಿ, ಆನಂದದಿಂದ ಮರಣವನ್ನು ಎದುರಿಸಬೇಕು.

### ಭಾಗವತವು ಸಾರಿರುವ ಕಲಿಯುಗದ ಸ್ಥಿತಿ-ಗತಿಗಳು

ಕಲಿಯುಗದಲ್ಲಿ ಸತ್ಯ, ದಯೆ, ತಾಳ್ಮೆ ಮೊದಲಾದ ಗುಣಗಳು ಇರುವುದಿಲ್ಲ. ಧನವಂತನೇ ಪ್ರತಿಷ್ಠಿತ ವ್ಯಕ್ತಿಯಾಗುತ್ತಾನೆ. ಬಲವುಳ್ಳವನಿಗೇ ನ್ಯಾಯ ದೊರಕುತ್ತದೆ. ವ್ಯಾಪಾರವು ಮೋಸದ ಚಿಂತನೆಯಿಂದ ಕೂಡಿರುತ್ತದೆ. ಬ್ರಾಹ್ಮಣರು ಅನುಷ್ಠಾನವನ್ನು ಬಿಟ್ಟವರಾಗಿದ್ದು, ಕೇವಲ ಜನಿವಾರವೇ ಅವರ ಪ್ರತೀಕವಾಗಿರುತ್ತದೆ. ಬಯ್ಯುವವನನ್ನೇ ವಿದ್ವಾಂಸ ಎನ್ನುತ್ತಾರೆ. ಮನುಷ್ಯರ ಜೀವನದ ಗುರಿ ಕುಡಿಯುವುದು, ತಿನ್ನುವುದೇ ಆಗಿರುತ್ತದೆ. ಪ್ರಚಾರಕ್ಕಾಗಿಯೇ ಧರ್ಮದ ಆಚರಣೆಗಳಿರುತ್ತವೆ. ಆಡಳಿತ ನಡೆಸುವವರು ಕ್ರೂರಿಗಳೂ, ಲೋಭಿಗಳೂ ಆಗಿರುತ್ತಾರೆ. ಮತಗಳಿಗೂ ಮನೆಗಳಿಗೂ ವ್ಯತ್ಯಾಸವೇ ಇರುವುದಿಲ್ಲ. ಮಠಗಳು ಮೋಜಿನ ತಾಣವಾಗಿರುತ್ತದೆ. ಆಶ್ರಮಕ್ಕೂ, ಮನೆಗೂ ವ್ಯತ್ಯಾಸವಿರುವುದಿಲ್ಲ. ಕಲಿಯುಗದ ಅಂತ್ಯದಲ್ಲಿ ಮನುಷ್ಯರು ಪ್ರಾಣಿಗಳಂತೆ ವರ್ತಿಸುತ್ತಾರೆ.

### ಆತ್ಮಾನುಭವವನ್ನು (ಮೋಕ್ಷವನ್ನು) ಪಡೆಯಲು ಏರಬೇಕಾದ ಹನ್ನೆರಡು ಮೆಟ್ಟಿಲುಗಳು

ಕಲಿಯುಗದಲ್ಲಿ ಆತ್ಮಾನುಭವವನ್ನು ಪಡೆಯಲು ವೇದವ್ಯಾಸರು ಭಾಗವತದಲ್ಲಿ ವಿವರಿಸಿರುವ ತತ್ತ್ವಗಳ ಸಾರವನ್ನು ಹನ್ನೆರಡು ಅಂಶಗಳಾಗಿ ಹೀಗೆ ಸಂಗ್ರಹಿಸಬಹುದು:

೧) ಸಾಧಕನಿಗೆ ಆತ್ಮಸಾಕ್ಷಾತ್ಕಾರದ ಗುರಿಯನ್ನು ಸಾಧಿಸಲು ಉತ್ಕಟವಾದ ಆಕಾಂಕ್ಷೆ ಇರಬೇಕು. ಆಗ ಗುರುವು ತಾನಾಗಿಯೇ ಅವನ ಬಳಿ ಬರುತ್ತಾನೆ.

೨) ಸಾಧಕನ ಅಂತರಂಗ (ಮನಸ್ಸು) ಹಾಗೂ ಬಹಿರಂಗ (ಲೋಕದ ವ್ಯವಹಾರಗಳು) ಎರಡೂ ಪರಿಶುದ್ಧವಾಗಿರಬೇಕು. ಶುದ್ಧಹೃದಯದ ದ್ರೌಪದಿಗೆ ಶ್ರೀಕೃಷ್ಣನು ಒಲಿದು ಅಕ್ಷಯಾಂಬರವನ್ನು ದಯಪಾಲಿಸಿದ.

೩) ಭಗವಂತನು ಕರುಣಿಸಿರುವ ಎಲ್ಲಾ ಸಹಾಯಗಳನ್ನೂ ಮತ್ತೆ ಮತ್ತೆ ನೆನಪಿಗೆ ತಂದುಕೊಳ್ಳುತ್ತಾ, ಭಕ್ತಿ-ಶ್ರದ್ಧೆಗಳಿಂದ, ಕೃತಜ್ಞತೆಯ ರೂಪವಾಗಿ ನಮಸ್ಕರಿಸಬೇಕು. ಭಕ್ತರಾದ ಪ್ರಹ್ಲಾದ ಹಾಗೂ ಅಕ್ರೂರನ ಚರಿತ್ರೆಗಳನ್ನು ಮನನ ಮಾಡಬೇಕು.

೪) ಭಗವಂತನ ಅನುಗ್ರಹದಿಂದ ವೈರಾಗ್ಯವನ್ನು ಪಡೆಯಲು ಪ್ರತಿನಿತ್ಯವೂ ಇಷ್ಟದೇವರ ನಾಮಸ್ಮರಣೆಯನ್ನು ಮಾಡಬೇಕು. (ಲೌಕಿಕ ಸುಖದಲ್ಲಿ ಆಸಕ್ತಿಯು ಕಡಿಮೆಯಾಗಿ ಭಗವಂತನಲ್ಲಿ ಪ್ರೀತಿ ಹೆಚ್ಚಾಗುವುದೇ ವೈರಾಗ್ಯ).

೫) ಮನಸ್ಸನ್ನು ಉದ್ರೇಕಗೊಳಿಸುವ, ಅಶಾಂತಗೊಳಿಸುವ ಪುಸ್ತಕಗಳನ್ನು (ಅಮಲು ಸಾಹಿತ್ಯ) ಓದಬಾರದು. ಬದಲಾಗಿ ಭಗವಂತನ ಚಿಂತನೆಗೆ ಪೂರಕವಾಗುವ, ಸದ್ ಗ್ರಂಥಗಳನ್ನು (ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ ಇತ್ಯಾದಿ ಆಧ್ಯಾತ್ಮಿಕ ಗ್ರಂಥಗಳು-ಅಮೃತ ಸಾಹಿತ್ಯ) ಓದಬೇಕು.

೬) ಭಗವಂತನಲ್ಲಿ ಭಕ್ತಿ ಉಂಟಾಗಲು, ಸತ್ಸಂಗವೇ ಮೊದಲನೆ ಸಾಧನೆ. ಜೀವನದಲ್ಲಿ ದೇವರನ್ನೇ ಗುರಿಯಾಗಿ ಹೊಂದಿರುವ ಮಹಾತ್ಮರೇ ಸಾಧು-ಸಂತರು. ಲೋಕಹಿತವೇ ಅವರ ಜೀವನದ ಉದ್ದೇಶ. ಇಂತಹ ಸಜ್ಜನರ ಸಹವಾಸವನ್ನು ಮಾಡುತ್ತಾ, ಸಾಧ್ಯವಾದಷ್ಟು ಅವರ ಸೇವೆಯನ್ನೂ ಮಾಡಬೇಕು. ದಾಸೀಪುತ್ರನಾಗಿ ಜನ್ಮತಾಳಿದ ಬಾಲಕನೇ, ಮಹರ್ಷಿಗಳ ಸತ್ಸಂಗದ ಫಲವಾಗಿ ನಾರದನಾದ.

೭) ಎಲ್ಲಾ ಜೀವಿಗಳಲ್ಲಿ ಹಾಗೂ ಪ್ರತಿಯೊಂದು ವಸ್ತುವಿನಲ್ಲಿ ಭಗವಂತನನ್ನು ಕಾಣುತ್ತಾ, ಹಿಂದಿನ ಜನ್ಮದ ಸಂಸ್ಕಾರಗಳನ್ನು(ವಾಸನೆಯನ್ನು) ಕಳೆದುಕೊಳ್ಳಬೇಕು. ಜಡಭರತನ ಕಥೆ ಇದನ್ನು ತಿಳಿಸುತ್ತದೆ.

೮) ಭಗವಂತನಿಗೇ ಶರಣಾಗಿ, ಅವನನ್ನು ಕಾಣಲು ಉತ್ಕಟವಾದ ಇಚ್ಛೆಯನ್ನು ಹೊಂದಬೇಕು. ಶರಣಾದ ಅರ್ಜುನನಿಗೆ ಶ್ರೀಕೃಷ್ಣ, ವಿಶ್ವರೂಪವನ್ನು ಕರುಣಿಸಿದ.

೯) ಭಗವಂತನ ಸೃಷ್ಟಿ ವೈಚಿತ್ರ್ಯದ ಬಗ್ಗೆ ಸದಾ ಪ್ರಶ್ನೆಗಳನ್ನು ಮನಸ್ಸಿನಲ್ಲಿ ಕೇಳಿಕೊಳ್ಳುತ್ತಾ, ಅವನ ಲೀಲೆಗಳನ್ನು ಸ್ಮರಿಸಿಕೊಳ್ಳಬೇಕು.

೧೦) ಮನಸ್ಸೇ ಮನುಷ್ಯನ ಬಂಧನಕ್ಕೂ ಹಾಗೂ ಮುಕ್ತಿಗೂ ಕಾರಣ. ಆದ್ದರಿಂದ ಮನಸ್ಸನ್ನು ಬುದ್ಧಿಯಿಂದ ನಿಯಂತ್ರಣದಲ್ಲಿ ಇಟ್ಟುಕೊಂಡು, ಜೀವನವನ್ನು ನಡೆಸಬೇಕು.

೧೧) ಸಜ್ಜನರು ಎಲ್ಲರಲ್ಲೂ ದೇವರನ್ನೇ ಕಾಣುತ್ತಾ, ಸ್ನೇಹಶೀಲರೂ, ಶಾಂತಸ್ವಭಾವದವರೂ, ಪರೋಪಕಾರಿಗಳೂ ಆಗಿರುತ್ತಾರೆ. ಇಂತಹ ಸಾಧು-ಸಂತರ ಆದರ್ಶಗಳನ್ನು ಕಂಡು, ತಿಳಿದು ತಾನೂ ಅವರಂತೆ ಸತ್ಕರ್ಮಗಳಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಶೀಲನಾಗಬೇಕು.

೧೨) 'ಹಿಂದೆ ಮಾಡಿದ ಕರ್ಮಗಳಿಗೆ ಅನುಗುಣವಾಗಿ ಪ್ರತಿಯೊಬ್ಬನ ಬದುಕು, ಸಾವು ಪೂರ್ವನಿಶ್ಚಿತವಾಗಿದೆ' ಎಂಬ ದೃಢನಿರ್ಧಾರದಿಂದ ಸಾಧಕನು, ಯಾವಾಗಲೂ ಸತ್ಕರ್ಮಗಳನ್ನೇ ಮಾಡುತ್ತಾ ಆತ್ಮದರ್ಶನದ ಗುರಿಯೊಂದನ್ನೇ ಹೊಂದಿರಬೇಕು.

ಶ್ರೀಕೃಷ್ಣನು ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯುವ ದೃಢನಿಷ್ಠೆಯನ್ನು ಕರುಣಿಸಲಿ ಎಂದು ಪ್ರಾರ್ಥಿಸೋಣ. ¤